

ಚಿತ್ರ: ಶಿಲ್ಪಾ ಕಬ್ಬಿಣಕಂತಿ

# ಬೀದಿ ದೀಪದ ಕಥೆ

■ **ವಿ. ಹೇಮಂತಕುಮಾರ,**
ಬೆಂಗಳೂರು

ನಮ್ಮೂರು ಹಳ್ಳಿ ಇರಲಿ, ದಿಲ್ಲಿ ಇರಲಿ, ನಮ್ಮೂರಿನಲ್ಲಿ ಬೀದಿ ದೀಪಗಳು ಇದ್ದೇ ಇರುತ್ತಲ್ಲವೇ? ಈ ಬೀದಿ ದೀಪಗಳು ಬರಲು ಕಾರಣನಾದ ಮಹಾಪುರುಷನ ಬಗ್ಗೆ ನಾವು ಎಂದಾದರೂ ಚಿಂತಿಸಿದ್ದೇವೆಯೇ? ಅವರು ಯಾರು ಗೊತ್ತೇ? ಅಮೆರಿಕದ ಫಿಲಿಡೆಲ್ಫಿಯಾದ ಬೆನ್ ಫ್ರಾಂಕ್ಲಿನ್ ಎಂಬುವರು. ಅವರೊಬ್ಬ ಪತ್ರಕರ್ತ, ಬರಹಗಾರ, ವಿಜ್ಞಾನಿ, ಸಂಶೋಧಕ! ಬಹುಮುಖ ಪ್ರತಿಭೆಯವರಾಗಿದ್ದ ಅವರು ತಮ್ಮ ಮನೆಯ ಮುಂದಿನ ರಸ್ತೆಗಳೆಲ್ಲ ರಾತ್ರಿಯ ಹೊತ್ತು ಕತ್ತಲೆಯಿಂದ ಕೂಡಿರುತ್ತಿದ್ದುದನ್ನು ಗಮನಿಸಿದರು. ಇದರ ಬಗ್ಗೆ ಏನಾದರೂ ಮಾಡಬೇಕೆಂದು ಫ್ರ್ಯಾಂಕ್ಲಿನರಿಗೆ ಅನಿಸಿತು. ಅವರು ನಗರ ಸಭೆಯವರಿಗೆ ಅರ್ಜಿ ಬರೆಯಲಿಲ್ಲ. ನಾಗರಿಕರಿಗೆ ಬುದ್ಧಿ ಹೇಳಲು ಹೋಗಲಿಲ್ಲ. ಅದರ ಬದಲು ಒಂದು ರಾತ್ರಿ ತಮ್ಮ ಮನೆಯ ಮುಂದೆ ಒಂದು ಉದ್ದನೆಯ ಕಬ್ಬಿಣದ ಕಂಬಿ ನೆಟ್ಟು ಲಾಟೀನನ್ನು ಹಚ್ಚಿದರು. ಅಂದಿನಿಂದ ಪ್ರತಿಸಂಜೆ ಲಾಟೀನನ್ನು ಕೆಳಗಿಳಿಸಿ ಹೊಸ ಬತ್ತಿಯನ್ನಿಟ್ಟು, ಎಣ್ಣೆ ತುಂಬಿಸಿ, ದೀಪ ಹೊತ್ತಿಸಿ ಮತ್ತೆ ಕಂಬಕ್ಕೆ ಲಾಟೀನನ್ನು ಸಿಗಿಸಿರುತ್ತಿದ್ದರು.

ಮೊದಲು ಕೆಲವು ದಿನ ಅವರ ಸುತ್ತಮುತ್ತಲಿನವರಿಗೆ ಫ್ರ್ಯಾಂಕ್ಲಿನ್ ಅವರ ಅಭ್ಯಾಸ ಹುಚ್ಚುತನವಾಗಿ ಕಾಣಿಸುತ್ತಿತ್ತು. ಆದರೆ ಲಾಟೀನಿನ ಬೆಳಕಿರುತ್ತಿದ್ದುರಿಂದ ಜನ ಅವರ ಮನೆಯ ಮುಂದೆ ನಿರಾತಂಕವಾಗಿ ನಡೆದು ಹೋಗುತ್ತಿದ್ದರು. ಭರವಸೆ ಮೂಡಿಸುವ, ಸ್ನೇಹಮಯ ವಾತಾವರಣವಿರುತ್ತಿತ್ತು. ಕೆಲವೇ ದಿನಗಳಲ್ಲಿ ಅವರ ನೆರೆಹೊರೆಯವರು ತಮ್ಮ ಮನೆಯ ಮುಂದೆಯೂ ಲಾಟೀನ್ ಹಚ್ಚಿಡಲು ಪ್ರಾರಂಭಿಸಿದರು.

ಇಡೀ ಬೀದಿ ಬೆಳಕಿನಿಂದ ಕೂಡಿರುತ್ತಿತ್ತು. ಇದನ್ನು ಗಮನಿಸಿದ ಉಳಿದ ಬೀದಿಯವರೂ ಒಬ್ಬೊಬ್ಬರಾಗಿ ಇವರನ್ನು ಅನುಸರಿಸತೊಡಗಿದರು. ಕೆಲವೇ ದಿನಗಳಲ್ಲಿ ಲಾಟೀನ್ ಚಳವಳಿ ಬೀದಿ ಬೀದಿಗೆ ಹಬ್ಬಿತು. ರಾತ್ರಿಯ ಹೊತ್ತು ಇಡೀ ಫಿಲಿಡೆಲ್ಫಿಯಾದ ನಗರಗಳು ಬೆಳಕಿನಿಂದ ಕಂಗೊಳಿಸುತ್ತಿದ್ದವು. ನಿಧಾನವಾಗಿ ಉಳಿದ ನಗರಗಳಿಗೂ ಇದು ಹಬ್ಬಿತು. ಮುಂದೆ ನಗರ ಸಭೆಗಳ ಕಾರ್ಯಕ್ರಮ ಪಟ್ಟಿಯಲ್ಲಿ ಬೀದಿ ದೀಪಗಳು ಸೇರಿಕೊಂಡವು.

ಒಬ್ಬ ಪ್ರಜ್ಞಾವಂತ ನಾಗರಿಕ ಪ್ರಾರಂಭಿಸಿದ ಸುಸಂಪ್ರದಾಯದಿಂದ ಇಡೀ ರಾಷ್ಟ್ರದಲ್ಲಿ ಬೀದಿ ದೀಪ ಹಚ್ಚುವ ಪದ್ಧತಿ ಪ್ರಾರಂಭವಾಯಿತು. ಫ್ರ್ಯಾಂಕ್ಲಿನ್ ತಮ್ಮ 84ನೇ ವಯಸ್ಸಿನಲ್ಲಿ 1790ನೇ ಇಸವಿಯಲ್ಲಿ ತೀರಿಕೊಂಡವರಾದರೂ ಇಂದಿಗೂ ಅವರು ಜನಮನದಲ್ಲಿ ಉಳಿದಿದ್ದಾರೆ. ■